# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:04–09–2021 ರಂದು ಸಮಯ 12.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀಮತಿ ಉಮಾದೇವಿ ಬಳಿಗಾರ್, ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಆನಂದ್.ಜಿ, ಸಹಾಯಕ ಅಭಿಯಂತರರು ವಾ.ನಂ.–155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) (ಹಿ.ಆ.ಪ.) – ಸದಸ್ಯರು
4. ಶ್ರೀಮತಿ.ರಿಜ್ವಾನ ಬೇಗಂ – ಸದಸ್ಯರು
5. ಶ್ರೀ ಪ್ರಕಾಶ್ (ಟಿ.ಇ.)– ಸದಸ್ಯರು
6. ಶ್ರೀ.ರಾಮಚಂದ್ರ (ಕಿ.ಅ–155) ಬೆಸ್ಕಾಂ
7. ಶ್ರೀ.ಕೆ.ವೆಂಕಟೇಶ ಎ.ಎಸ್.ಐ ಬಸವನಗುಡಿ ಸಂಚಾರಿ ಠಾಣೆ
8. ಕೃಷ್ಣಮೂರ್ತಿ–ಜಲ ಪರಿವೀಕ್ಷಕರು ಬಿಡಬ್ಲ್ಯೂಎಸ್ಎಸ್‌ಬಿ
9. ಸ್ವಾಮಿಗೌಡ– ತೋಟಗಾರಿಕೆ ಇಲಾಖೆ
10. ಶ್ರೀ ಉದಯ– ಸಾರ್ವಜನಿಕರು.
11. ಶ್ರೀ ಎಂ.ಚಂದ್ರಶೇಖರ್ – ಸಾರ್ವಜನಿಕರು.
12. ಶ್ರೀಮತಿ.ದೇವಕಿ.ಎನ್– ಸಾರ್ವಜನಿಕರು.
13. ಪ್ರೇಮಲತ – ಸಾರ್ವಜನಿಕರು.
14. ಲಿತೇಶ್– ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

1) 4ನೇ ಅಡ್ಡರಸ್ತೆ ಹಾಗೂ 14ನೇ ಮುಖ್ಯರಸ್ತೆ ಹನುಮಂತನಗರದಲ್ಲಿ ಚರಂಡಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಚರಂಡಿಯ ಅನುಪಯುಕ್ತ ಮಣ್ಣನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಕಾರ್ಯಪಾಲಕ ಅಭಿಯಂತರರು (ಆರ್.ಐ–ದಕ್ಷಿಣ) ರವರಿಗೆ ಕ್ರಮ ವಹಿಸಲು ಕೋರಲಾಗಿರುತ್ತದೆ.

2) ಕಾವೇರಿ ನದಿ ರಸ್ತೆಯಲ್ಲಿ ಡಾಂಬರೀಕರಣ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಹಾಗೂ ಅಂಗನವಾಡಿ ಕೇಂದ್ರ ಹಿಂಭಾಗದ ರಸ್ತೆಯನ್ನು ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಂಡು ಅಭಿವೃದ್ಧಿಪಡಿಸಲು ಕೋರಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–154 ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

3) ಜವರೇಗೌಡ ರಸ್ತೆಯಲ್ಲಿ ಬೋರ್‌ವೆಲ್ ರಿಪೇರಿ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–154 ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

4) ಕಾವೇರಿ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಕುಡಿಯುವ ನೀರಿನ ಸೋರಿಕೆಯನ್ನು ಸರಿಪಡಿಸಲು ಅಗೆದಿರುವ ರಸ್ತೆಯನ್ನು ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–154 ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

BWSSB ಇಲಾಖೆ:

1) ಸಿಂಧೂ ನದಿ ರಸ್ತೆಯಲ್ಲಿ ಹೊಸದಾಗಿ ಒಳಚರಂಡಿ ಕೊಳವೆ ಅಳವಡಿಸಲು ಹಾಗೂ ಹಿಂದೂಮಹಾಸಾಗರ ರಸ್ತೆಯಲ್ಲಿ ಒಳಚರಂಡಿ ಕೊಳವೆ ಅಳವಡಿಸಲು ಅಗೆದಿರುವ ರಸ್ತೆಯನ್ನು ಪೂರ್ವ ಸ್ಥಿತಿಗೆ ತರಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಎಂ.ಎನ್.ಕೆ ಪಾರ್ಕ್
ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕ್ರಮಕೈಗೊಳ್ಳಲು
ಕೋರಲಾಗಿರುತ್ತದೆ.

2) ಮಳೆ ಇರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಿ.ಡಬ್ಲ್ಯೂ.ಎಸ್.ಎಸ್.ಬಿಗೆ ಸಂಬಂಧಿಸಿದ ಒಳಚರಂಡಿ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಎಂ.ಎನ್.ಕೆ ಪಾರ್ಕ್
ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕ್ರಮಕೈಗೊಳ್ಳಲು
ಕೋರಲಾಗಿರುತ್ತದೆ.

ಆರೋಗ್ಯ ಇಲಾಖೆ/ಘನತ್ಯಾಜ್ಯ ಇಲಾಖೆ

1) ಹನುಮಂತನಗರದ ವಾರ್ಡ್‌ನಲ್ಲಿ ಕಾವೇರಿ ನದಿ ರಸ್ತೆಯ ಪಕ್ಕದಲ್ಲಿ ಬರುವ ಮುಜರಾಯಿ ಇಲಾಖೆಗೆ ಸೇರಿದ ಜಾಗವನ್ನು ಸ್ವಚ್ಛಗೊಳಿಸಲು ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಕ್ರಮಕೈಗೊಳ್ಳಲು ಸೂಚಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–154 ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

ಕಸ.

2) ವಾರ್ಡ್ ವ್ಯಾಪ್ತಿಯಲ್ಲಿ ಒಣ ಸಂಗ್ರಹಿಸಲು ಬರುವ ಗಾಡಿಯು ಸಣ್ಣ ಆಟೋಗಳನ್ನು ಕಳುಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–154 ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

**ಪೋಲೀಸ್ ಇಲಾಖೆ:**

1) 4ನೇ ಅಡ್ಡರಸ್ತೆಯಲ್ಲಿ ನೋ ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: ಠಾಣಾಧಿಕಾರಿಗಳು ಬಸವನಗಡಿ ಸಂಚಾರಿ ಪೋಲೀಸ್ ಠಾಣೆ ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.

2) 4ನೇ ಅಡ್ಡರಸ್ತೆಯಲ್ಲಿ ಹಾಗೂ ವಾರ್ಡ್‌ನ ಪಾರ್ಕ್‌ಗಳ ಸಮೀಪ ಸರಗಳ್ಳತನದ ಆಗುತ್ತಿರುವುದರಿಂದ ಪೋಲೀಸ್ ಬೀಟಾ ಹೆಚ್ಚಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: ಠಾಣಾಧಿಕಾರಿಗಳು ಕಾನೂನು ಸುವ್ಯವಸ್ಥೆ ಹನುಮಂತನಗರ /ಕೆಂಪೇಗೌಡನಗರ ಪೋಲೀಸ್ ಠಾಣೆ ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

4/9/21

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-155 ಹನುಮಂತನಗರ

4/9.

ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-155 ಹನುಮಂತನಗರ

ಪ್ರತಿಯನ್ನು,

1. ಮಾನ್ಯ ಮುಖ್ಯ ಆಯುಕ್ತರು, ಬೃಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಮತ್ತು ವಲಯ ಆಯುಕ್ತರು(ದ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
6. ಮಾನ್ಯ ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
7. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
8. ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಹನುಮಂತನಗರ ರವರ ಅವಗಾಹನೆಗೆ.
10. ಪೋಲೀಸ್ ಇನ್ಸ್‌ಪೆಕ್ಟರ್, ಕಾನೂನು ಸುವ್ಯವಸ್ಥೆ ಹನುಮಂತನಗರ/ಕೆಂಪೇಗೌಡನಗರ ಪೋಲೀಸ್ ಠಾಣೆ ರವರ ಅವಗಾಹನೆಗೆ.
11. ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
13. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
14. ಕಛೇರಿ ಕಡತಕ್ಕೆ.